# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 140/2014 ಪಿ.ಡಬ್ಲ್ಯೂಃ 9

ಸಿಡಬ್ಲೂಃ 11

ಸಾಕ್ಷಿದಾರರ ಹೆಸರು : ಸುನೀಲ

ತಂದೆಯ ಹೆಸರು : ವಿಷ್ಣು ವೆರ್ಣೆಕರ

ವಯಸ್ಸು : 52 ವರ್ಷ

ಉದ್ಯೋಗ : ಖಾಸಗಿ ಕೆಲಸ

ವಾಸ್ತವ್ಯ : ಮುಂಡಗೋಡ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 06-01-2023

## ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ

ನನ್ನ ಅಂಗಡಿಯ ಹೆಸರು ಪೂನಂ ಜ್ಯೂವೆಲರ್ಸ ಅಗಿದ್ದು , ಹುಬ್ಬಳ್ಳಿ ರಸ್ತೆ , ಮುಂಡಗೋಡ ದಲ್ಲಿ ಇರುತ್ತದೆ. ಆಗ ನಾನೇ ಅಂಗಡಿಯ ಮಾಲೀಕನಾಗಿದ್ದೆ. 2008-09 ಇಸವಿಯ ಏಪ್ರಿಲ್ / ಮೇ ತಿಂಗಳಲ್ಲಿ ಒಬ್ಬರು ನನ್ನ ಅಂಗಡಿಗೆ ಬಂದು ಒಂದು ಬಂಗಾರದ ಉಂಗುರ , ಒಂದು ಜೊತೆ ಬಂಗಾರದ ಓಲೆ , ಇನ್ನೊಂದು ಜೊತೆ ಕಿವಿಯ ಓಲೆ , ಒಂದು ನಕ್ಲೆಸ ಅಡವಿಟ್ಟುಕೊಂಡು ಹಣವನ್ನು ಕೊಡಲು ಕೋರಿಕೊಂಡರು. ಸದರಿ ವ್ಯಕ್ತಿಯು ತನ್ನ ಹೆಂಡತಿಗೆ ಹುಷಾರಿಲ್ಲಾ ಎಂದು ಶ್ರಸ್ತಚಿಕಿತ್ಸೆ ಮಾಡಿಸಲು ಹಣದ ಅವಶ್ಯಕತೆ ಇದ್ದು , ಸದರಿ ಬಂಗಾರದ ಒಡವೆಗಳನ್ನು ಅಡವಿಟ್ಟುಕೊಂಡು ಹಣವನ್ನು ನೀಡಲು ವಿನಂತಿಸಿದರು. ಸದರಿ ವ್ಯಕ್ತಿಯು ತಾನು ಎರಡು ಅಥವಾ ಮೂರು ದಿನ ಬಿಟ್ಟು ಒಡವೆಗಳನ್ನು ಬಿಡಿಸಿಕೊಂಡು ಹೋಗುವದಾಗಿ ಹೇಳಿದರು. ಆದರೆ ಸ್ವಲ್ಪ ದಿನದ ನಂತರ ಪೋಲೀಸರು ಸದರಿ ವ್ಯಕ್ತಿಯನ್ನು ನನ್ನ ಅಂಗಡಿಗೆ ಕರೆದುಕೊಂಡು ಬಂದು ಆ ಬಂಗಾರದ ಒಡವೆಗಳನ್ನು ಜಪ್ತುಪಡಿಸಿಕೊಂಡು ಹೋದರು. ಸದರಿ ಘಟನೆಯ ಬಗ್ಗೆ ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲಾ. ಸದರಿ ಬಂಗಾರದ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ.

**( ಎಪಿಪಿ ಯವರು ಸಾಕ್ಷಿಯಿನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ , ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ . ಅನುಮತಿ ನೀಡಲಾಯಿತು )**

**ಪಾಟೀ ಸವಾಲುಃ ಎ ಪಿ ಪಿ ಯವರಿಂದಃ**

2. ಸದರಿ ವ್ಯಕ್ತಿಯ ಹೆಸರು ಪ್ರಕಾಶ ವಿನಾಯಕ ಪಾಟೀಲ ಎಂದರೆ ನನಗೆ ಗೊತ್ತಿಲ್ಲಾ. ದಿನಾಂಕಃ 02.12.2008 ರಂದು ಪೋಲೀಸರು ನನ್ನ ಅಂಗಡಿಗೆ ಬಂದು ಬಂಗಾರದ ಒಡವೆಗಳನ್ನು ಜಪ್ತು ಪಡಿಸಿಕೊಂಡು ಹೋಗಿರುತ್ತಾರೆ ಎಂದರೆ ಸರಿ. ಆಗ ಪೋಲೀಸರು ಸದರಿ ಆರೋಪಿಯು ಬಂಗಾರದ ಒಡವೆಗಳನ್ನು ಕಳ್ಳತನ ಮಾಡಿರುವುದಾಗಿ ನನಗೆ ತಿಳಿಸಿದರು ಎಂದರೆ ಸರಿ. ನನ್ನ ಅಂಗಡಿಯಲ್ಲಿ ಬಂಗಾರದ ಒಡವೆಗಳನ್ನು ಅಡವಿಟ್ಟ ವ್ಯಕ್ತಿಯೂ ಸಹ ಪೋಲೀಸರ ಜೊತೆಯಲ್ಲಿ ಬಂದಿದ್ದರು ಎಂದರೆ ಸರಿ. ಸದರಿ ವ್ಯಕ್ತಿಯನ್ನು ನೋಡಿದರೆ ನನಗೆ ಗುರುತಿಸಲು ಆಗುವುದಿಲ್ಲಾ. ನಾನು ಸದರಿ ಘಟನೆಯ ಬಗ್ಗೆ ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲಾ ಎಂದರೆ ಸರಿ. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯ ಒಂದನೇ ಪ್ಯಾರಾದ 1 ನೇ ವಾಕ್ಯವನ್ನು ನಿಪಿ.5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ ಬಿ ಎನ್ ವಕೀಲರಿಂದ ಆರೋಪಿ ಪರವಾಗಿಃ**

3. ನಾನು ನ್ಯಾಯಾಲಯಕ್ಕೆ ನಾನು ಅಕ್ಕಸಾಲಿಗ ಎಂದು ಹೇಳಲು ಯಾವುದೇ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲಾಲ ಎಂದರೆ ಸರಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಬಂಗಾರದ ಅಂಗಡಿಗೆ ಬಂಗಾರದ ಆಭರಣಗಳನ್ನು ತೆಗೆದುಕೊಂಡು ಬಂದಾಗ ಅದರ ಮಾಲೀಕತ್ವದ ಕುರಿತು ವಿಚಾರಿಸುತ್ತೀರಿ ಎಂದರೆ ಸರಿ. ಸಾಮಾನ್ಯವಾಗಿ ಅವರೇ ಮಾಲೀಕರೆಂದು ಸ್ಪಷ್ಟಪಡಿಸಿಕೊಳ್ಳಲು ಅವರು ತಂದ ಬಂಗಾರದ ರಶೀದಿಯನ್ನು ನೋಡುತ್ತೇವೆ ಎಂದರೆ ಸರಿ. ರಶೀದಿ ಇಲ್ಲ ಎಂದರೆ ನಾವು ಅಭರಣಗಳನ್ನು ಸ್ವೀಕರಿಸುವುದಿಲ್ಲಾ ಎಂದರೆ ಸರಿ. ಆರೋಪಿಗೆ ಮಾನವೀಯ ದೃಷ್ಟಿಯಿಂದ ಸಹಾಯ ಮಾಡುವದರ ಸಲುವಾಗಿ ಅವರಿಂದ ಬಂಗಾರದ ಒಡವೆಗಳನ್ನು ಸ್ವೀಕರಿಸಿದ್ದೇನೆ.

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**